# ಏಳು ಹನುಮಂತ ಎಷ್ಟು ನಿದ್ರೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Note:** Singer has followed these lyrics.

ರಾಗ: ಭೂಪಾಳಿ ತಾಳ: ಝಂಪೆ

ಏಳು ಹನುಮಂತ ಎಷ್ಟು ನಿದ್ರೆ || ಪ ||

ಮಾತನಾಡಲು ಬೇಕು ಮುದ್ರಿಕೆ ತರಲುಬೇಕು
ಹರಿ ಕುಶಲ ಜಾನಕಿಗೆ ತಿಳಿಸಬೇಕು
ವನವ ಕೀಳಲು ಬೇಕು ಚೂಡಾಮಣಿಯ ತರಲುಬೇಕು
ಹರಿ ಹರುಷದಿಂದಲಿ ಖ್ಯಾತಿಯ ಪಡಲುಬೇಕು || ೧ ||

ಶರಧಿ ಲಂಘಿಸಬೇಕು ರಘುಪತಿಯ ಕೂಡಿರಬೇಕು
ದುರುಳ ಇಂದ್ರಜಿತನ ಗೆಲಿಯಬೇಕು
ಅನುಜ ಲಕ್ಷ್ಮಣಗೆ ಸಂಜೀವನ ತಂದು ಕೊಡಲುಬೇಕು
ಹನುಮಂತ ಬಲವಂತ ಎಂದೆನಿಸಬೇಕು || ೨ ||

ದುಷ್ಟ ರಕ್ಕಸರನೆಲ್ಲ ಕುಟ್ಟಿ ಕೆಡಹಲುಬೇಕು
ಹತ್ತು ತಲೆ ರಾವಣನ ಬಲವಿಳಿಸಲುಬೇಕು
ಭಕ್ತ ವಿಭೀಷಣನಿಗೆ ಪಟ್ಟಗಟ್ಟಲುಬೇಕು
ಲಕ್ಷ್ಮಿ ಸಹಿತ ಅಯೋಧ್ಯೆಗೆ ತೆರಳಲುಬೇಕು || ೩ ||

ಕುರು ಕುಲದಲ್ಲಿ ಕುಂತಿ ಸುತನಾಗಿ ಜನಿಸಲುಬೇಕು
ರಣದಲ್ಲಿ ಕೌರವರ ಗೆಲಿಯಬೇಕು
ವನದೊಳಗೆ ಘನ ತೃಷೆಯ ಘಾಸಿಪಡಿಸಲುಬೇಕು
ಮಡದಿಗೆ ಸೌಗಂಧವ ತರಲುಬೇಕು || ೪ ||

ಯತಿಯಾಗಿ ಬರಬೇಕು ಕುಮತ ಖಂಡಿಸಬೇಕು

ಅದ್ಭುತ ವಾದಿಗಳ ಗೆಲಿಯಬೇಕು
ಮಧ್ವ ಶಾಸ್ತ್ರವ ಲೋಕಕೆಲ್ಲಾ ಭೋಧಿಸಬೇಕು
ಮುದ್ದು ಪುರಂದರ ವಿಠ್ಠಲ ಎಂದೆನಿಸಬೇಕು || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇಲ್ಲಿ ಮೂರು ನುಡಿಗಳಲ್ಲಿ ರಾಮಾಯಣವನ್ನೆಲ್ಲ ಸಂಗ್ರಹಿಸಿದ್ದಾರೆ. ಮುಂದಿನ ನುಡಿಯಲ್ಲಿ ಭಾರತದ ಕತೆಯಲ್ಲಿ ಭೀಮನ ಪಾತ್ರ ಸೂಕ್ಷ್ಮವಾಗಿ ಬಂದಿದೆ; ಕಡೆಯ ನುಡಿ ಮಧ್ವಾಚಾರ್ಯರ ಪ್ರಸ್ತುತತೆಯನ್ನು ಹೇಳುತ್ತದೆ.

**ಮಾತನಾಡಲು ಬೇಕು** – ರಾಮಲಕ್ಷ್ಮಣರು ಪಂಪಾಸರಸ್ಸನ್ನು ದಾಟಿ ಋಷ್ಯಮೂಕಕ್ಕೆ ಬಂದಾಗ ಹನುಮಂತನೇ ಅವರನ್ನು ಎದುರುಗೊಂಡು, ರಾಮನೊಂದಿಗೆ ಮಾತನಾಡಿ ಅವನ ಪ್ರೀತಿಯನ್ನು ಪಡೆದುಕೊಂಡವನು.

**ಮುದ್ರಿಕೆ...** – ರಾಮನ ಮುದ್ರಿಕೆಯನ್ನು ಸೀತೆಗೆ ಒಯ್ದವನು.

**ಚೂಡಾಮಣಿ** – ಸೀತೆ ಕೊಟ್ಟ ಚೂಡಾಮಣಿಯನ್ನು ರಾಮನಿಗೆ ಮುಟ್ಟಿಸಿದವನು.

**ಹರಿ ಹರುಷದಿಂದಲಿ** – ರಾಮನನ್ನು ಸಂತೋಷಪಡಿಸಿದನೆಂದು ಹನುಮಂತನ ಯಶಸ್ಸು ಹೆಚ್ಚಿತು.

**ಲಕ್ಷ್ಮೀ ಸಹಿತ** – ಲಕ್ಷ್ಮಿಯ ಅವತಾರವಾದ ಸೀತೆಯೊಂದಿಗೆ.

**ವನದೊಳಗೆ...** – ಪಾಂಡವರ ವನವಾಸದಲ್ಲಿ ಯಕ್ಷಪ್ರಶ್ನೆಯ ಸಂದರ್ಭ.

**ಮಡದಿಗೆ...** – ದ್ರೌಪದಿಗೆ ಸೌಗಂಧಿಕಪುಷ್ಪವನ್ನು ತಂದುಕೊಟ್ಟ ಪ್ರಸಂಗ.

**ಅದ್ಭುತವಾದಿಗಳ** – ಮಾಯಾವಾದಿಗಳ. ಮಿಥ್ಯವಾಗಿರುವ ಜಗತ್ತು ಸತ್ಯವಾಗಿರುವಂತೆ ತೋರಿಕೊಳ್ಳುವುದೇ ಅದ್ಭುತ; ಆದರೆ ಅದು ತೋರಿಕೆಯಷ್ಟೆ, ಭ್ರಮೆಯಿಂದ ಉಂಟಾದದ್ದು. ಸಂಜೆಯ ಮಬ್ಬಿನಲ್ಲಿ ಹಗ್ಗವು ಹಾವಾಗಿ ತೋರಿಕೊಳ್ಳುವಂತೆ; ದೀಪ ತಂದಾಗ ಹಾವು ಮಾಯವಾಗುತ್ತದೆ.

**Classification:** Keerthane
**Ankita:** purandara vittala
**Location:** NA

**Category:** Hanuma Stuti, Udaya Raga

**Sub-Category:** hanuma, nidde, sita, choodamani, Samudra, rama, Lakshmana, asura, ravana, Vibhishana, Lakshmi, ayodhya, bhima, kourava, kaadu, draupadi, madhva, madhwacharya, hanuma-bhima-madhva, loka,

**Pravachana:** NA

**Explanation:** NA